1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 54/2025

| | | |
|---|---|---|
| ಸಾಕ್ಷಿದಾರರ ಹೆಸರು | ನಂದಿನಿಶೆಟ್ಟಿ | ಪಿ.ಡಬ್ಲ್ಯೂ.17 |
| ಗಂಡನ ಹೆಸರು | ಶ್ರೀನಿವಾಸ ಶೆಟ್ಟಿ | ಸಿ.ಡಬ್ಲ್ಯೂ.28 |
| ವಯಸ್ಸು | 49 ವರ್ಷ | |
| ಉದ್ಯೋಗ | ಮಹಿಳಾ ಪಿ.ಎಸ್ಐ.,<br>ಮಲ್ಲಂದೂರು ಪೊಲೀಸ್ ಠಾಣೆ | |
| ವಾಸಸ್ಥಳ | ಚಿಕ್ಕಮಗಳೂರು | |

ದಿನಾಂಕಃ 12-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ -

1. ಏಪ್ರಿಲ್ 2022 ರಿಂದ ದಿಃ 19-09-2025 ರವರೆಗೆ ಚಿಕ್ಕಮಗಳೂರು ಮಹಿಳಾ ಪೊಲೀಸ್ ಠಾಣೆಯಲ್ಲಿ ಪಿ.ಎಸ್ ಐ. ಆಗಿ ಕಾರ್ಯ ನಿರ್ವಹಿಸಿದ್ದೇನು.

2. ದಿಃ 16-01-2025 ರಂದು ಜಿಲ್ಲಾ ನಿಸ್ತಂತು ಘಟಕದಿಂದ ಶಾರದ ಕೋಂ ಮಂಜುನಾಥ ಎಂಬುವವರು ಹಲ್ಲೆಯ ಹಿನ್ನಲೆಯಲ್ಲಿ ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ನಾನು ಸದರಿ ಮಾಹಿತಿಯನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿ ಪ್ರಾಸಾ.14 ಮತ್ತು ಚಾಸಾ.25 ರವರನ್ನು ಸದರಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಂಡು ಬರುವಂತೆ ನೇಮಿಸಿ ಕಳುಹಿಸಿದೆನು.

3. ಅದರಂತೆ ಅದೇ ದಿನ ಪ್ರಾಸಾ.14 ಮತ್ತು ಚಾಸಾ.25 ರವರು ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುವನ್ನು ಭೇಟಿ ನೀಡಿ ಆಕೆ ಹೇಳಿಕೆ ನೀಡುವ ಸ್ಥಿತಿಯಲ್ಲಿ ಇರದಿದ್ದ ಕಾರಣ ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳನ್ನು ಸಂಪರ್ಕಿಸಿದಾಗ ಅವರು ಆಕೆ ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲವೆಂದು ದೃಢೀಕರಿಸಿದ ಕಾರಣ ವೈದ್ಯಾಧಿಕಾರಿಗಳ ಸಮಕ್ಷಮ ಗಾಯಾಳುವಿನ ಜೊತೆಯಲ್ಲಿದ್ದ ಆಕೆಯ ತಾಯಿಯಾದ ಪ್ರಾಸಾ.1 ಸಿದ್ದಮ್ಮರವರ ಹೇಳಿಕೆಯನ್ನು ಪ್ರಾಸಾ.14 ರವರು ಮಧ್ಯಾಹ್ನ 1 ಗಂಟೆಯಿಂದ 2.30 ಗಂಟೆಯವರೆಗೆ ಪಡೆದುಕೊಂಡು ಅದೇ ದಿನ ಸಂಜೆ 6.30 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿದರು. ನಾನು ಸದರಿ ಹೇಳಿಕೆಯನ್ನು ಓದಿಕೊಂಡು ಮೇಲಾಧಿಕಾರಿಗಳಿಗೆ ಆ ಬಗ್ಗೆ ಮಾಹಿತಿ ನೀಡಿ ಅದೇ ದಿನ ಸಂಜೆ 6.45 ಗಂಟೆಗೆ ಸದರಿ ಹೇಳಿಕೆ ದೂರಿನ ಮೇರೆಗೆ ಠಾಣಾ ಮೊ.ಸಂಃ 7/2025 ರಲ್ಲಿ ಬಿ.ಎನ್.ಎಸ್. ಕಲಂ 85, 109, 118(1), 351(2) ಮತ್ತು 352 ರಂತೆ ಆರೋಪಿಯ ವಿರುದ್ದ

ಪ್ರಕರಣವನ್ನು ದಾಖಲು ಮಾಡಿದೆನು. ಸಾಕ್ಷಿ ಸದರಿ ಹೇಳಿಕೆ ದೂರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಹೇಳಿಕೆ ದೂರನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ಪ್ರಥಮ ವರ್ತಮಾನ ವರದಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ.36 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.36(ಎ) ಎಂದು ಗುರುತಿಸಲಾಯಿತು. ನಂತರ ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡೆನು.

4. ಪ್ರಾಸಾ.14 ರವರು ಪ್ರಾಸಾ.1 ರವರ ಹೇಳಿಕೆಯನ್ನು ನಿಪಿ.1 ರಂತೆ ದಾಖಲಿಸುವ ಕಾಲಕ್ಕೆ ಚಾಸಾ.25 ರವರು ತಮ್ಮ ರೆಡಮಿ ನೋಟ್ 8 ಪ್ರೋ ಮೊಬೈಲಿನಲ್ಲಿ ವಿಡಿಯೋ ಚಿತ್ರಿಕರಿಸಿದ್ದಾಗಿ ತಿಳಿಸಿದರು. ನಂತರ ಚಾಸಾ.25 ರವರು ತಾವು ಚಿತ್ರಿಕರಿಸಿದ ವಿಡಿಯೋವನ್ನು ಠಾಣೆಗೆ ಒದಗಿಸಲಾಗಿದ್ದ ಡೆಲ್ ಕಂಪ್ಯೂಟರಿಗೆ ವರ್ಗಾಯಿಸಿ ನಂತರ ಅದನ್ನು ಒಂದು ಖಾಲಿ ಡಿವಿಡಿ ಗೆ ವರ್ಗಾಯಿಸಿ ಸದರಿ ಡಿವಿಡಿ ಮತ್ತು ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ 63(4)(ಸಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ಸದರಿ ಡಿವಿಡಿ ಮತ್ತು ದೃಢೀಕರಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.37 ಮತ್ತು ಪಿ.38 ಎಂದು , ನಿಪಿ.38 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.38(ಎ) ಎಂದು ಗುರುತಿಸಲಾಯಿತು. ನಿಪಿ.37

ಡಿವಿಡಿಯನ್ನು ನ್ಯಾಯಾಲಯದ ಕಂಪ್ಯೂಟರಿಗೆ ತಂತ್ರಜ್ಞರ ಸಹಾಯದಿಂದ ಅಳವಡಿಸಿ ಆರೋಪಿ, ಆತನ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದರಲ್ಲಿದ್ದ 2 ನಿಮಿಷ 21 ಸೆಕೆಂಡುಗಳ ವಿಡಿಯೋವನ್ನು ನೋಡಿ ಚಾಸಾ.25 ರವರು ಚಿತ್ರಿಕರಿಸಿ ಡಿವಿಡಿ ಗೆ ವರ್ಗಾಯಿಸಿ ನೀಡಿದ ವಿಡಿಯೋ ಅದೇ ಎಂದು ನುಡಿದಿರುತ್ತಾರೆ.

5. ನಂತರ ಆರೋಪಿಯ ಪತ್ತೆಗಾಗಿ ಪ್ರಾಸಾ.12 ಮತ್ತು ಹೆಚ್.ಸಿ. ನಾಗರಾಜ್ ರವರನ್ನು ನೇಮಿಸಿ ಜ್ಞಾಪನ ನೀಡಿ ಕಳುಹಿಸಿದೆನು. ಸಾಕ್ಷಿ ಸದರಿ ಜ್ಞಾಪನ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಜ್ಞಾಪನವನ್ನು ನಿಪಿ.39 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.39(ಎ) ಎಂದು ಗುರುತಿಸಲಾಯಿತು.

6. ದಿಃ 21-01-2025 ರಂದು ಹಾಸನ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಶಾರದ ಕೋಂ ಮಂಜುನಾಥರವರು ಮೃತಪಟ್ಟಿದ್ದಾಗಿ ಬೆಳಿಗ್ಗೆ 9.30 ಗಂಟೆಗೆ ಜಿಲ್ಲಾ ನಿಸ್ತಂತು ಘಟಕಕ್ಕೆ ಮತ್ತು ಠಾಣಾ ಸ್ಥಿರ ದೂರವಾಣಿಗೆ ಮಾಹಿತಿ ಬಂತು. ನಂತರ ನಾನು ಸದರಿ ಮಾಹಿತಿಯನ್ನು ಪ್ರಾಸಾ.16 ರವರಿಗೆ ತಿಳಿಸಿದೆನು.

7. ಅದೇ ದಿನ ಬೆಳಿಗ್ಗೆ 10.15 ಗಂಟೆಗೆ ಪ್ರಾಸಾ.1 ರವರು ಠಾಣೆಗೆ ಹಾಜರಾಗಿ ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತನ್ನ ಮಗಳು ಶಾರದರವರು ಚಿಕಿತ್ಸೆ ಫಲಕಾರಿಯಾಗದೇ ಆ ದಿನ

ಬೆಳಿಗ್ಗೆ 8.30 ಗಂಟೆಗೆ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾಗಿ, ಆರೋಪಿ ಕಾಲಿನಿಂದ ಶಾರದಳ ಹೊಟ್ಟೆಗೆ ಒದ್ದಿದ್ದರಿಂದ ಮತ್ತು ತಲೆಗೂದಲು ಎಳೆದು ಗೋಡೆಗೆ ತಲೆಯನ್ನು ಹೊಡೆಸಿದ್ದರಿಂದ ಆಕೆಯ ಸಾವು ಸಂಭವಿಸಿದ್ದಾಗಿ ಮತ್ತು ಮುಷ್ಟಿ ಕಟ್ಟಿ ತಲೆಗೆ ಮತ್ತು ಮುಖಕ್ಕೆ ಹೊಡೆದು ಕೊಲೆ ಮಾಡಿದ್ದಾಗಿ ಹೇಳಿಕೆ ನೀಡಿರುತ್ತಾರೆ.

8. ನಂತರ ನಾನು ಈ ಪ್ರಕರಣದಲ್ಲಿ ಬಿ.ಎನ್.ಎಸ್. ಕಲಂ 103 ನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ತನಿಖೆ ಮುಂದುವರೆಸಲು ನ್ಯಾಯಾಲಯದ ಅನುಮತಿ ಕೋರಿ ಮನವಿ ಸಲ್ಲಿಸಿ ಅದೇ ದಿನ ಆದೇಶವನ್ನು ಪಡೆದುಕೊಂಡೆನು. ಸಾಕ್ಷಿ ಸದರಿ ಮನವಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಮನವಿಯನ್ನು ನಿಪಿ.40 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.40(ಎ) ಎಂದು ಗುರುತಿಸಲಾಯಿತು.

9. ನಂತರ ಪ್ರಾಸಾ.16 ರವರು ನನಗೆ ಅದೇ ದಿನ ಜ್ಞಾಪನವನ್ನು ನೀಡಿ ಮೃತಳ ಶವ ತನಿಖೆಯನ್ನು ಹಾಸನದ ತಾಲ್ಲೂಕು ದಂಡಾಧಿಕಾರಿಯವರಿಂದ ನಡೆಸಿ ದಾಖಲಾತಿಗಳನ್ನು ಪಡೆದುಕೊಂಡು ತಮಗೆ ವರದಿ ಮಾಡುವಂತೆ ಸೂಚಿಸಿದ್ದರು.

10. ಸಾಕ್ಷಿ ಸದರಿ ಜ್ಞಾಪನವನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಜ್ಞಾಪನವನ್ನು ಈಗಾಗಲೇ ನಿಪಿ.28 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.28(ಬಿ) ಎಂದು

ಗುರುತಿಸಲಾಯಿತು. ಅದರಂತೆ ನಾನು ಹಾಸನದ ಹಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಮೃತ ಶಾರದರವರ ಶವವನ್ನು ನೋಡಿದೆನು. ನಂತರ ಹಾಸನದ ತಾಲ್ಲೂಕು ದಂಡಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ ಮೃತಳ ಸಾವು ಮದುವೆಯಾಗಿ 7 ವರ್ಷಗಳ ಒಳಗೆ ಸಂಭವಿಸಿದ್ದರಿಂದ ಆಕೆಯ ಶವ ಪಂಚನಾಮೆಯನ್ನು ನಡೆಸಿಕೊಡುವಂತೆ ಕೋರಿದೆನು. ಸಾಕ್ಷಿ ಸದರಿ ಮನವಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿಯನ್ನು ಈಗಾಗಲೇ ನಿಪಿ.25 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.25(ಬಿ) ಎಂದು ಗುರುತಿಸಲಾಯಿತು.

11. ನಂತರ ಹಾಸನದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಚಾಸಾ.26 ರವರಿಗೆ ಮನವಿಯನ್ನು ಸಲ್ಲಿಸಿ ಶವ ಪಂಚನಾಮೆಯನ್ನು ನಡೆಸಿಕೊಡಲು ತಮ್ಮ ಕಛೇರಿಯಿಂದ 3 ಜನ ಸಿಬ್ಬಂದಿಗಳನ್ನು ಪಂಚರನ್ನಾಗಿ ಕಳುಹಿಸಿ ಕೊಡುವಂತೆ ಕೋರಿದೆನು. ಸಾಕ್ಷಿ ಸದರಿ ಮನವಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಮನವಿಯನ್ನು ನಿಪಿ.41 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.41(ಎ) ಎಂದು ಗುರುತಿಸಲಾಯಿತು.

12. ಅದರ ಮೇರೆಗೆ ಚಾಸಾ.26 ರವರು ಕಛೇರಿಯ ಆದೇಶವನ್ನು ಹೊರಡಿಸಿ ತಮ್ಮ ಇಲಾಖೆಯ ಪ್ರಾಸಾ.6 ಮತ್ತು

ಚಾಸಾ.10 ರವರನ್ನು ಪಂಚರನ್ನಾಗಿ ನೇಮಿಸಿ ಕಳುಹಿಸಿದ್ದರು. ಸಾಕ್ಷಿ ಸದರಿ ಆದೇಶವನ್ನು ಮತ್ತು ಅದರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಆದೇಶವನ್ನು ನಿಪಿ.42 ಎಂದು, ಅದರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.42(ಎ) ಎಂದು ಗುರುತಿಸಲಾಯಿತು.

13. ಆ ದಿನ ನಾನು ಹಾಸನದ ಹಿಮ್ಸ್ ಆಸ್ಪತ್ರೆಗೆ ನನ್ನೊಂದಿಗೆ ಹೆಚ್.ಸಿ.265 ಅಬ್ದುಲ್ ಕರೀಂ, ಚಾಸಾ.19 - ಪಿಸಿ 19 ಸುನಿತಾ ಮತ್ತು ಪ್ರಾಸಾ.12 ರವರನ್ನು ಕರೆದುಕೊಂಡು ಹೋಗಿದ್ದೆನು. ನಂತರ ಹಾಸನದ ತಹಸೀಲ್ದಾರ್ ರಾದ ಪ್ರಾಸಾ.13 ರವರು ಹಾಸನದ ಹಿಮ್ಸ್ ಆಸ್ಪತ್ರೆಯ ಶವಗಾರದಲ್ಲಿ ಶಾರದರವರ ಶವ ತನಿಖೆಯನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ನಡೆಸಿ ಆ ಬಗ್ಗೆ ಜರುಗಿಸಿದ ಪಂಚನಾಮೆ, ಪಂಚರಿಗೆ ಕೊಟ್ಟ ನೋಟೀಸ್, ಸಾಕ್ಷಿದಾರರ ಹೇಳಿಕೆಗಳು ಮತ್ತು ಆ ಸಮಯದಲ್ಲಿ ತೆಗೆಯಲಾದ ಫೋಟೋಗಳನ್ನು ನನಗೆ ಕೊಟ್ಟರು. ನಂತರ ನಾನು ಚಾಸಾ.19 ರವರನ್ನು ಶವದ ಬೆಂಗಾವಾಲಿನಲ್ಲಿ ಇರಿಸಿ ಮರಣೋತ್ತರ ಪರೀಕ್ಷೆಯಾದ ನಂತರ ಶವವನ್ನು ಪ್ರಾಸಾ.1 ರವರ ವಶಕ್ಕೆ ನೀಡುವಂತೆ ಸೂಚಿಸಿದೆನು. ಅದರಂತೆ ಅವರು ಸದರಿ ಪರೀಕ್ಷೆಯಾದ ಬಳಿಕ ಶವವನ್ನು ಪ್ರಾಸಾ.1 ರವರ ವಶಕ್ಕೆ ನೀಡಿ ಅವರಿಂದ ರಸೀದಿಯನ್ನು ಪಡೆದು ನನಗೆ ಹಾಜರುಪಡಿಸಿದರು.

14. ನಂತರ ನಾನು ಅದೇ ದಿನ ಠಾಣೆಗೆ ಹಿಂದಿರುಗಿ ಮೇಲೆ ಹೇಳಿದ ಎಲ್ಲಾ ದಾಖಲಾತಿಗಳನ್ನು ಪ್ರಾಸಾ.16 ರವರಿಗೆ ಹಾಜರುಪಡಿಸಿ ಆ ಬಗ್ಗೆ ವರದಿ ನೀಡಿದೆನು.

15. ಸಾಕ್ಷಿ ಸದರಿ ವರದಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.29 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.29(ಬಿ) ಎಂದು ಗುರುತಿಸಲಾಯಿತು. ಪ್ರಕರಣದ ಮುಂದಿನ ತನಿಖೆಯನ್ನು ಫ್ರಾಸಾ.16 ರವರು ವಹಿಸಿಕೊಂಡರು.

<u>ಪಾಟೀ ಸವಾಲು: ಆರೋಪಿಯ ಪರವಾಗಿ ಶ್ರೀ ಜಿ.ಎಸ್.ಎಸ್. ವಕೀಲರಿಂದಃ-</u>

16. ದಿಃ 21-01-2025 ರಂದು ಫ್ರಾಸಾ.1 ರವರೊಂದಿಗೆ ಯಾರೆಲ್ಲಾ ಠಾಣೆಗೆ ಬಂದಿದ್ದರು ಎಂದರೆ ಸಾಕ್ಷಿ ಅವರೊಬ್ಬರೇ ಬಂದಿದ್ದರು ಎನ್ನುತ್ತಾರೆ. ಆಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ಬೆಳಿಗ್ಗೆ 10.15 ಗಂಟೆ ಎನ್ನುತ್ತಾರೆ. ಅದರ ಪೂರ್ವದಲ್ಲಿ ಫ್ರಾಸಾ.1 ರವರು ನಿಮ್ಮ ಠಾಣೆಗೆ ಬಂದಿದ್ದರೇ ಎಂದರೆ ಸಾಕ್ಷಿ ನನ್ನ ಸಮಕ್ಷಮ ಬಂದಿರಲಿಲ್ಲ ಎನ್ನುತ್ತಾರೆ. ಹಿಂದೆ ಫ್ರಾಸಾ.1 ರವರು ನಿಮ್ಮ ಠಾಣೆಗೆ ಯಾವುದಾದರೂ ದೂರನ್ನು ಕೊಟ್ಟಿದ್ದರೇ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ದಿಃ 21-01-2025 ರಂದು ಫ್ರಾಸಾ.1 ರವರು ನೀಡಿದ ಹೇಳಿಕೆಯನ್ನು ಚಾಸಾ.25 ರವರು ಕಂಪ್ಯೂಟರಿನಲ್ಲಿ ಟೈಪ್ ಮಾಡಿದರು. ನೀವು ಹೇಳಿದಂತೆ ಆ ದಿನ ಫ್ರಾಸಾ.1 ರವರು ನಿಮಗೆ ಯಾವುದೇ ಹೇಳಿಕೆಯನ್ನು ನೀಡದಿದ್ದರೂ ಸಹ ನೀವು ನಿಮಗೆ ಬೇಕಾದಂತೆ ಟೈಪ್ ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

17. ದಿಃ 21-1-2025 ರಂದು ನಾನು, ಫ್ರಾಸಾ.12, ಚಾಸಾ.19 ಮತ್ತು ಹೆಚ್.ಸಿ.265 ಅಬ್ದುಲ್ ಕರೀಂರವರು ನಮ್ಮ ಇಲಾಖಾ ಜೀಪಿನಲ್ಲಿ ಹಾಸನದ ಹಿಮ್ಸ್ ಆಸ್ಪತ್ರೆಗೆ ಹೋಗಿದ್ದೆವು. ನಾವು ಠಾಣೆಯಿಂದ ಹೊರಟಾಗ ಸಮಯ ಸುಮಾರು ಮಧ್ಯಾಹ್ನ 12.30 ಗಂಟೆಯಾಗಿರಬಹುದು. ಹಾಸನಕ್ಕೆ ತಲುಪಿದಾಗ ಮಧ್ಯಾಹ್ನ 2 ಗಂಟೆಯಾಗಿತ್ತು. ಆ ರೀತಿ ನೀವು ಅಲ್ಲಿಗೆ ಹೋಗಿ ಬಂದಿದ್ದನ್ನು ಠಾಣಾ ದಿನಚರಿಯಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

18. ನೀವು ಹೇಳಿದಂತೆ ಆ ದಿನ ಹಾಸನಕ್ಕೆ ಹೋಗಿಲ್ಲ ಮತ್ತು ಅಲ್ಲಿನ ಹಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಆ ದಿನ ಹಾಸನದ ಹಿಮ್ಸ ಆಸ್ಪತ್ರೆಯಿಂದ ಜಿಲ್ಲಾ ನಿಸ್ತಂತು ಘಟಕಕ್ಕೆ ಮತ್ತು ನಿಮ್ಮ ಠಾಣೆಯ ಸ್ಥಿರ ದೂರವಾಣಿಗೆ ಮಾಹಿತಿ ಬಂದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

19. ದಿಃ 16-01-2025 ರಂದು ಜಿಲ್ಲಾ ನಿಸ್ತಂತು ಘಟಕದಿಂದ ಶಾರದ ಕೋಂ ಮಂಜುನಾಥ ಎಂಬುವವರು ಹಲ್ಲೆಯ ಹಿನ್ನಲೆಯಲ್ಲಿ ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು, ನಾನು ಸದರಿ ಮಾಹಿತಿಯನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿ ಫ್ರಾಸಾ.14 ಮತ್ತು ಚಾಸಾ.25 ರವರನ್ನು ಸದರಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಂಡು ಬರುವಂತೆ

ನೇಮಿಸಿ ಕಳುಹಿಸಿದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

20. ಅದರಂತೆ ಅದೇ ದಿನ ಪ್ರಾಸಾ.14 ಮತ್ತು ಚಾಸಾ.25 ರವರು ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುವನ್ನು ಭೇಟಿ ನೀಡಿ ಆಕೆ ಹೇಳಿಕೆ ನೀಡುವ ಸ್ಥಿತಿಯಲ್ಲಿ ಇರದಿದ್ದ ಕಾರಣ ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳನ್ನು ಸಂಪರ್ಕಿಸಿದಾಗ ಅವರು ಆಕೆ ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲವೆಂದು ದೃಢೀಕರಿಸಿದ ಕಾರಣ ವೈದ್ಯಾಧಿಕಾರಿಗಳ ಸಮಕ್ಷಮ ಗಾಯಾಳುವಿನ ಜೊತೆಯಲ್ಲಿದ್ದ ಆಕೆಯ ತಾಯಿಯಾದ ಪ್ರಾಸಾ.1 ಸಿದ್ದಮ್ಮರವರ ಹೇಳಿಕೆಯನ್ನು ನಿಪಿ.1 ರಂತೆ ಪ್ರಾಸಾ.14 ರವರು ಮಧ್ಯಾಹ್ನ 1 ಗಂಟೆಯಿಂದ 2.30 ಗಂಟೆಯವರೆಗೆ ಪಡೆದುಕೊಂಡು ಅದೇ ದಿನ ಸಂಜೆ 6.30 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿದರು, ನಾನು ಸದರಿ ಹೇಳಿಕೆಯನ್ನು ಓದಿಕೊಂಡು ಮೇಲಾಧಿಕಾರಿಗಳಿಗೆ ಆ ಬಗ್ಗೆ ಮಾಹಿತಿ ನೀಡಿ ಅದೇ ದಿನ ಸಂಜೆ 6.45 ಗಂಟೆಗೆ ಸದರಿ ಹೇಳಿಕೆ ದೂರಿನ ಮೇರೆಗೆ ನಿಪಿ.36 ರಂತೆ ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲು ಮಾಡಿದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

21. ಪ್ರಾಸಾ.14 ರವರು ಪ್ರಾಸಾ.1 ರವರ ಹೇಳಿಕೆಯನ್ನು ನಿಪಿ.1 ರಂತೆ ದಾಖಲಿಸುವ ಕಾಲಕ್ಕೆ ಚಾಸಾ.25 ರವರು ತಮ್ಮ ರೆಡಮಿ ನೋಟ್ 8 ಪ್ರೋ ಮೊಬೈಲಿನಲ್ಲಿ ವಿಡಿಯೋ ಚಿತ್ರೀಕರಿಸಿದ್ದಾಗಿ ತಿಳಿಸಿದರು, ನಂತರ ಚಾಸಾ.25 ರವರು ತಾವು ಚಿತ್ರೀಕರಿಸಿದ ವಿಡಿಯೋವನ್ನು ಠಾಣೆಗೆ ಒದಗಿಸಲಾಗಿದ್ದ ಡೆಲ್

ಕಂಪ್ಯೂಟರಿಗೆ ವರ್ಗಾಯಿಸಿ ನಂತರ ಅದನ್ನು ನಿಪಿ.37 ಡಿವಿಡಿ ಗೆ ವರ್ಗಾಯಿಸಿಕೊಟ್ಟಿದ್ದಾಗಿ ಆ ಬಗ್ಗೆ ನಿಪಿ.38 ರಂತೆ ದೃಢೀಕರಣ ಪತ್ರವನ್ನು ನೀಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

22. ನಂತರ ಆರೋಪಿಯ ಪತ್ತೆಗಾಗಿ ಪ್ರಾಸಾ.12 ಮತ್ತು ಹೆಚ್.ಸಿ. ನಾಗರಾಜ್ ರವರನ್ನು ನೇಮಿಸಿ ನಿಪಿ.39 ರಂತೆ ಜ್ಞಾಪನವನ್ನು ನೀಡಿ ಕಳುಹಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿಃ 21-01-2025 ರಂದು ಹಾಸನ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಶಾರದ ಕೋಂ ಮಂಜುನಾಥರವರು ಮೃತಪಟ್ಟಿದ್ದಾಗಿ ಬೆಳಿಗ್ಗೆ 9.30 ಗಂಟೆಗೆ ಜಿಲ್ಲಾ ನಿಸ್ತಂತು ಘಟಕಕ್ಕೆ ಮತ್ತು ಠಾಣಾ ಸ್ಥಿರ ದೂರವಾಣಿಗೆ ಮಾಹಿತಿ ಬಂತು, ನಂತರ ನಾನು ಸದರಿ ಮಾಹಿತಿಯನ್ನು ಪ್ರಾಸಾ.16 ರವರಿಗೆ ತಿಳಿಸಿದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

23. ಅದೇ ದಿನ ಬೆಳಿಗ್ಗೆ 10.15 ಗಂಟೆಗೆ ಪ್ರಾಸಾ.1 ರವರು ಠಾಣೆಗೆ ಹಾಜರಾಗಿ ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತನ್ನ ಮಗಳು ಶಾರದರವರು ಚಿಕಿತ್ಸೆ ಫಲಕಾರಿಯಾಗದೇ ಆ ದಿನ ಬೆಳಿಗ್ಗೆ 8.30 ಗಂಟೆಗೆ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾಗಿ , ಆರೋಪಿ ಕಾಲಿನಿಂದ ಶಾರದಳ ಹೊಟ್ಟೆಗೆ ಒದ್ದಿದ್ದರಿಂದ ಮತ್ತು ತಲೆಗೂದಲು ಎಳೆದು ಗೋಡೆಗೆ ತಲೆಯನ್ನು ಹೊಡೆಸಿದ್ದರಿಂದ ಆಕೆಯ ಸಾವು ಸಂಭವಿಸಿದ್ದಾಗಿ ಮತ್ತು ಮುಷ್ಟಿ ಕಟ್ಟಿ ತಲೆಗೆ ಮತ್ತು

ಮುಖಕ್ಕೆ ಹೊಡೆದು ಕೊಲೆ ಮಾಡಿದ್ದಾಗಿ ಹೇಳಿಕೆ ನೀಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

24. ನಂತರ ಪ್ರಾಸಾ.16 ರವರು ನನಗೆ ಅದೇ ದಿನ ನಿಪಿ.28 ರಂತೆ ಜ್ಞಾಪನವನ್ನು ನೀಡಿ ಮೃತಳ ಶವ ತನಿಖೆಯನ್ನು ಹಾಸನದ ತಾಲ್ಲೂಕು ದಂಡಾಧಿಕಾರಿಯವರಿಂದ ನಡೆಸಿ ದಾಖಲಾತಿಗಳನ್ನು ಪಡೆದುಕೊಂಡು ತಮಗೆ ವರದಿ ಮಾಡುವಂತೆ ಸೂಚಿಸಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದರಂತೆ ನಾನು ಹಾಸನದ ಹಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಮೃತ ಶಾರದರವರ ಶವವನ್ನು ನೋಡಿದೆನು, ನಂತರ ಹಾಸನದ ತಾಲ್ಲೂಕು ದಂಡಾಧಿಕಾರಿಗಳಿಗೆ ನಿಪಿ.25 ರಂತೆ ಮನವಿಯನ್ನು ಸಲ್ಲಿಸಿ ಮೃತಳ ಸಾವು ಮದುವೆಯಾಗಿ 7 ವರ್ಷಗಳ ಒಳಗೆ ಸಂಭವಿಸಿದ್ದರಿಂದ ಆಕೆಯ ಶವ ಪಂಚನಾಮೆಯನ್ನು ನಡೆಸಿಕೊಡುವಂತೆ ಕೋರಿದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

25. ನಂತರ ಹಾಸನದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಚಾಸಾ.26 ರವರಿಗೆ ನಿಪಿ.41 ರಂತೆ ಮನವಿಯನ್ನು ಸಲ್ಲಿಸಿ ಶವ ಪಂಚನಾಮೆಯನ್ನು ನಡೆಸಿಕೊಡಲು ತಮ್ಮ ಕಛೇರಿಯಿಂದ 3 ಜನ ಸಿಬ್ಬಂದಿಗಳನ್ನು ಪಂಚರನ್ನಾಗಿ ಕಳುಹಿಸಿ ಕೊಡುವಂತೆ ಕೋರಿದೆನು, ಅದರ ಮೇರೆಗೆ ಚಾಸಾ.26 ರವರು ನಿಪಿ.42 ರಂತೆ ಕಛೇರಿಯ ಆದೇಶವನ್ನು ಹೊರಡಿಸಿ ತಮ್ಮ ಇಲಾಖೆಯ

ಫ್ರಾಸಾ.6 ಮತ್ತು ಚಾಸಾ.10 ರವರನ್ನು ಪಂಚರನ್ನಾಗಿ ನೇಮಿಸಿ ಕಳುಹಿಸಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

26. ಆ ದಿನ ನಾನು ಹಾಸನದ ಹಿಮ್ಸ ಆಸ್ಪತ್ರೆಗೆ ನನ್ನೊಂದಿಗೆ ಹೆಚ್.ಸಿ.265 ಅಬ್ದುಲ್ ಕರೀಂ, ಚಾಸಾ.19 - ಪಿಸಿ 19 ಸುನಿತಾ ಮತ್ತು ಫ್ರಾಸಾ.12 ರವರನ್ನು ಕರೆದುಕೊಂಡು ಹೋಗಿದ್ದೆನು, ನಂತರ ಹಾಸನದ ತಹಸೀಲ್ದಾರ್ ರಾದ ಫ್ರಾಸಾ.13 ರವರು ಹಾಸನದ ಹಿಮ್ಸ ಆಸ್ಪತ್ರೆಯ ಶವಗಾರದಲ್ಲಿ ಶಾರದರವರ ಶವ ತನಿಖೆಯನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ನಡೆಸಿ ಆ ಬಗ್ಗೆ ಜರುಗಿಸಿದ ಪಂಚನಾಮೆ, ಪಂಚರಿಗೆ ಕೊಟ್ಟ ನೋಟೀಸ್, ಸಾಕ್ಷಿದಾರರ ಹೇಳಿಕೆಗಳು ಮತ್ತು ಆ ಸಮಯದಲ್ಲಿ ತೆಗೆಯಲಾದ ಫೋಟೋಗಳನ್ನು ನನಗೆ ಕೊಟ್ಟರು, ನಂತರ ನಾನು ಚಾಸಾ.19 ರವರನ್ನು ಶವದ ಬೆಂಗಾವಾಲಿನಲ್ಲಿ ಇರಿಸಿ ಮರಣೋತ್ತರ ಪರೀಕ್ಷೆಯಾದ ನಂತರ ಶವವನ್ನು ಫ್ರಾಸಾ.1 ರವರ ವಶಕ್ಕೆ ನೀಡುವಂತೆ ಸೂಚಿಸಿದೆನು, ಅದರಂತೆ ಅವರು ಸದರಿ ಪರೀಕ್ಷೆಯಾದ ಬಳಿಕ ಶವವನ್ನು ಫ್ರಾಸಾ.1 ರವರ ವಶಕ್ಕೆ ನೀಡಿ ಅವರಿಂದ ರಸೀದಿಯನ್ನು ಪಡೆದು ನನಗೆ ಹಾಜರುಪಡಿಸಿದರು, ನಂತರ ನಾನು ಅದೇ ದಿನ ಠಾಣೆಗೆ ಹಿಂದಿರುಗಿ ಮೇಲೆ ಹೇಳಿದ ಎಲ್ಲಾ ದಾಖಲಾತಿಗಳನ್ನು ಫ್ರಾಸಾ.16 ರವರಿಗೆ ಹಾಜರುಪಡಿಸಿ ಆ ಬಗ್ಗೆ ನಿಪಿ.29 ರಂತೆ ವರದಿ ನೀಡಿದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ